

ಸೈಬರ್ ಬರ್

ಸಾಫ್ಟ್‌ವೇರ್ ಕಂಪನಿಯು 'ಬಗ್ ಬೌಂಟಿ' ಕಾರ್ಯಕ್ರಮ ನಡೆಸುತ್ತದೆ.ಯಾವುದೇ ಕಂಪನಿ ತನ್ನ ನೆಟ್‌ವರ್ಕ್ ಭದ್ರತೆ ಮಾಡಿಕೊಳ್ಳಲು, ಕಂಪ್ಯೂಟರ್ ತಾಂತ್ರಿಕ ದೋಷ ಪತ್ತೆ ಮಾಡಲು ಹ್ಯಾಕರ್‌ಗಳನ್ನು ಆಹ್ವಾನಿಸಿ ನಡೆಸುವ ಕಾರ್ಯಕ್ರಮವೇ 'ಬಗ್ ಬೌಂಟಿ'. ಹೀಗೆ ತಾಂತ್ರಿಕ ದೋಷವನ್ನು (ಬಗ್) ಪತ್ತೆಹಚ್ಚಿದವರಿಗೆ ಕೊಡುವ ದೊಡ್ಡ ಮೊತ್ತದ ಸಂಭಾವನೆಯನ್ನು ಬೌಂಟಿ ಎಂದು ಕರೆಯಲಾಗುತ್ತದೆ. ಸ್ಟಾರ್ ಬಕ್ಸ್, ಇನ್‌ಸ್ಟಾಗ್ರಾಮ್, ಗೋಲ್ಡ್‌ಮನ್ ಸ್ಯಾಚ್ಸ್, ಟ್ವಿಟರ್, ಜೊಮ್ಯಾಟೊ ಮತ್ತು ಒನ್ ಪ್ಲಸ್ ಸೇರಿದಂತೆ ಹಲವು ಬಹುರಾಷ್ಟ್ರೀಯ ಕಂಪನಿಗಳು ಈ ಕಾರ್ಯಕ್ರಮದ ಸಹಯೋಗ ಹೊಂದಿವೆ. 'ಹ್ಯಾಕರ್ ಒನ್'ನ2019ರ ಹ್ಯಾಕರ್ ಒನ್ ಪವರ್ಡ್ ಸೆಕ್ಯೂರಿಟಿ ರಿಪೋರ್ಟ್ ಪ್ರಕಾರ ಭಾರತದ ನೈತಿಕ ಹ್ಯಾಕರ್ ಸಮುದಾಯಕ್ಕೆ 2018ರಲ್ಲಿ $2,336,024 ಬೌಂಟೀಸ್‌ಗಳು ದೊರಕಿವೆ.

19 ವರ್ಷದವನಿದ್ದಾಗಲೇ ನೈತಿಕ ಹ್ಯಾಕಿಂಗ್ ಬಗ್ಗೆ ಕಲಿಯಲಾರಂಭಿಸಿದ ಶಿವಂ ಒಂದೇ ವರ್ಷದಲ್ಲಿ 1 ಲಕ್ಷ 25 ಸಾವಿರ ಡಾಲರ್ ಸಂಪಾದಿಸಿದ್ದಾನೆ.

'ಆ್ಯಪಲ್‌ನಂಥ ಪ್ರತಿಷ್ಠಿತ ಕಂಪನಿಗಳು ಭದ್ರತೆಗಾಗಿ 'ಬಗ್ ಬೌಂಟಿ' ಕಾರ್ಯಕ್ರಮವನ್ನು ಏರ್ಪಡಿಸುತ್ತವೆ. 1 ಲಕ್ಷದಿಂದ 10 ಲಕ್ಷ ಡಾಲರ್‌ಗಳನ್ನು ಬಗ್‌ಗಳನ್ನು ಕಂಡುಹಿಡಿದಿದ್ದಕ್ಕೆ ಕೊಡುತ್ತದೆ. ಭಾರತದಲ್ಲಿ ಹೆಚ್ಚು ಸೈಬರ್ ಸೆಕ್ಯೂರಿಟಿ ಬೇಕಿದೆ' ಎನ್ನುತ್ತಾರೆ ಶಿವಂ. ಭಾರತದಲ್ಲಿಯೂ ಕೆಲವು ಕಂಪನಿಗಳು ಬಗ್ ಬೌಂಟಿ ಕಾರ್ಯಕ್ರಮಗಳನ್ನು ನಡೆಸುತ್ತಿವೆ. ಆದರೆ ಪ್ರಮಾಣ ಕಡಿಮೆ.

'ಹ್ಯಾಕಿಂಗ್‌ಗಾಗಿ ದಿನಕ್ಕೆ 15 ಗಂಟೆಗಳನ್ನು ಕಳೆದಿದ್ದಿದೆ. ಇಡೀ ದಿನ ಹ್ಯಾಕಿಂಗ್ ಸಹವಾಸಕ್ಕೇ ಹೋಗದೇ ಕಳೆದ ದಿನಗಳೂ ಇವೆ' ಎನ್ನುವ ಶಿವಂ, ಮೊದಲನೇ ಬಾರಿ ಇನ್‌ಸ್ಟಾ ಕಾರ್ಟ್ ಮತ್ತು ಮಾಸ್ಟರ್ ಕಾರ್ಡ್ ಹ್ಯಾಕ್ ಮಾಡಿದಾಗ ಆದ ಸಂತೋಷಕ್ಕೆ ಇಡೀ ರಾತ್ರಿ ನಿದ್ದೆಯನ್ನೇ ಮಾಡಿರಲಿಲ್ಲವಂತೆ!

## ಬೂದು ಟೊಪ್ಪಿಗೆ ಹ್ಯಾಕರ್

1990ರ ನಂತರ ಹುಟ್ಟಿಕೊಂಡ ಪದ – ಗ್ರೇ ಹ್ಯಾಟ್ ಹ್ಯಾಕರ್ಸ್. ಈ ವರ್ಗದ ಹ್ಯಾಕರ್‌ಗಳು ಕೆಲವೊಮ್ಮೆ ಕಾನೂನುಗಳನ್ನು ಮುರಿಯುತ್ತಾರೆ. ನೈತಿಕ ಹ್ಯಾಕಿಂಗ್‌ನ ನಿಷ್ಠುರ ಹಾದಿಯ ಆಚೀಚೆ ಅಡ್ಡದಾರಿ ತುಳಿದು ಬರುತ್ತಾರೆ. ಆದರೆ ಕಪ್ಪು ಟೊಪ್ಪಿಗೆ ಹ್ಯಾಕರ್‌ಗಳಷ್ಟು ಇವರು ಅಪಾಯಕಾರಿಯಲ್ಲ. ಭದ್ರತೆಯ ಚಕ್ರವ್ಯೂಹ ಭೇದಿಸುವುದು ಇವರಿಗೆ ಗೊತ್ತಿರುತ್ತದೆ. ಆದರೆ ಈ ಜ್ಞಾನವನ್ನು ಯಾವುದೇ ಅಪರಾಧಗಳನ್ನು ಮಾಡಲು ಉಪಯೋಗಿಸದೆ ತಾವು ಗುರ್ತಿಸಿದ ಕುಂದನ್ನು ಎಲ್ಲರಿಗೂ ಹೇಳಿ ಅದನ್ನು ಸರಿಪಡಿಸಲು ಪ್ರಯತ್ನಿಸುತ್ತಾರೆ. ಇಲ್ಲವಾದರೆ ಹಾಗೆಯೇ ಬಿಡುತ್ತಾರೆ.

